<u>1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ</u>

<u>ಸಿಸಿ ನಂ:90/2017</u>

ಪಿಡಬ್ಲ್ಯೂ: 3 ಸಿಡಬ್ಲ್ಯೂ: 6

ಸಾಕ್ಷಿಯನ್ನು ತಾ:- **27.01.2020** ರಂದು ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಹನುಮಂತು |
| ತಂದೆಯ ಹೆಸರು | ಹನುಮಯ್ಯ |
| ವಯಸ್ಸು | 48 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ತಳಗವಾದಿ ಗ್ರಾಮ, ಮಳವಳ್ಳಿ ತಾಲ್ಲೂಕು. |

**<u>ಮುಖ್ಯ ವಿಚಾರಣೆ: ಶ್ರೀ ಸ ಸ ಅರವರಿಂದ.</u>**

1. ನನಗೆ ಓದಲು ಬರೆಯಲು ಬರುತ್ತದೆ. ಸಹಿಯನ್ನು ಮಾಡುತ್ತೇನೆ.
2. ಈಗ ತೋರಿಸಿದ ದಾಖಲೆಗೆ ನನ್ನ ಸಹಿ ಇದೆ. ಸದರಿ ದಾಖಲೆಯು ಮಹಜರ್ ಆಗಿದ್ದು ಅದನ್ನು ನಿ.ಪಿ-2 ಸಾಕ್ಷಿಯ ಸಹಿಯನ್ನು ನಿ.ಪಿ-2 ಬಿ ಎಂದು ಗುರುತಿಸಲಾಯಿತು.
3. ಇಲ್ಲಿಗೆ 2-3 ವರ್ಷಗಳ ಹಿಂದೆ ಪೋಲೀಸರು ಗಟ್ಟಿಕೊಪ್ಪಲು ಗ್ರಾಮಕ್ಕೆ ಬಂದಿದ್ದರು. ಚಾಸಾ-1 ರವರ ವಾಹನ ಹಾಗೂ ಕುಮಾರ್ ಎಂಬುವವರ ಸ್ಕೂಟರ್ ಅಪಘಾತದ ವಿಚಾರಕ್ಕೆ ಸಂಬಂಧಿಸಿದಂತೆ ಪೋಲೀಸರು ಸ್ಥಳಕ್ಕೆ ಬಂದು ಸ್ಥಳ ಪರಿಶೀಲಿಸಿ ಮಹಜರ್ ನ್ನು ಮಾಡಿದರು. ಆಗ ಸಮಯ ಸುಮಾರು 3-4 ಗಂಟೆ ಆಗಿತ್ತು. ಆಗ ನಾನು ಪೋಲೀಸರು, ಚಾಸಾ-1 ಮತ್ತು ಬೇರೆ ಅಕ್ಕ-ಪಕ್ಕದ ಗದ್ದೆಯವರು ಇದ್ದರು.

**<u>ಪಾಟೀಸವಾಲು: ಆರೋಪಿ ಪರ ವಕೀಲರಿಂದ:</u>**

4. ನಾನು ಪೋಲೀಸರು ನೋಟಿಸ್ ಕೊಟ್ಟಿದ ಮೇರೆಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ, ಚಂದ್ರಶೇಖರ್ ರವರ ಜೊತೆ ಬಂದಿರುವುದಿಲ್ಲ. ಚಾಸಾ-1 ಮತ್ತು ನಾನು ಒಂದೇ ಊರಿನವರು. ನಾವು ಒಂದೇ ಊರಿನವರವರಾದ ಕಾರಣ ಚಂದ್ರಶೇಖರ್ ಪರವಾಗಿ ನಾನು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

5. ನಾನು ನಿ.ಪಿ-2 ಕ್ಕೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮಹಜರ್ ಮಾಡಿದ ಚೆಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಜಮೀನುಗಳು ಇವೆ, ಹಾಗೂ ಉತ್ತರಕ್ಕೆ: ಮಾರೇಹಳ್ಳಿಗೆ ಹೋಗುವ ರಸ್ತೆ, ದಕ್ಷಿಣಕ್ಕೆ: ಗಟ್ಟಿಕೊಪ್ಪಲು ಗ್ರಾಮಕ್ಕೆ ಹೋಗುವ ರಸ್ತೆ. ನಿ.ಪಿ-2 ರ ಒಳ ಅಂಶಗಳನ್ನು ಪೋಲೀಸರು ನನಗೆ ಓದಿ ಹೇಳಿಲ್ಲ ಎಂದರೆ ಸರಿ. ಸದರಿ ಸ್ಕೂಟರ್ ನ ನಂಬರ್ ಅಥವಾ ಕಂಪನಿಯ ಹೆಸರು ನನಗೆ ಹೇಳಲು ಬರುವುದಿಲ್ಲ. ನನ್ನನ್ನು ಬಿಟ್ಟು ಬೇರೆ ಯಾರು ಬಂದು ಮಹಜರ್ ಗೆ ಸಹಿ ಮಾಡಿರುತ್ತಾರೆ ಎಂದು ಅವರ ಹೆಸರು ವಿಳಾಸ ನನಗೆ ನಿಖರವಾಗಿ ಗೊತ್ತಿಲ್ಲ. ಸದರಿ ಮಹಜರ್ ನ್ನು ಮದ್ಯಾಹ್ನ 3 ಗಂಟೆಯಿಂದ 4-00 ಗಂಟೆಯವರೆಗೂ ಬರೆದಿರುತ್ತಾರೆ.

6. ಸದರಿ ಮಹಜರ್ ಸಮಯದಲ್ಲಿ ಚಾಸಾ-1 ರವರ ಸ್ಕೂಟರ್ ನ್ನು ವಶಕ್ಕೆ ಪಡೆದು ಕೊಂಡಿರುತ್ತಾರೆ. ಸದರಿ ಸ್ಕೂಟರ್ ಗೆ ಏನೇನು ಡ್ಯಾಮೇಜ್ ಆಗಿರುತ್ತದೆ ಎಂದು ಮಹಜರ್ ನಲ್ಲಿ ಬರೆದಿರುವುದಿಲ್ಲ. ನನಗೆ ಮಹಜರ್ ಸ್ಥಳಕ್ಕೆ ಯಾರು ಕರೆದುಕೊಂಡು ಹೋಗಿರುವುದಿಲ್ಲ, ನಾನು ಆ ಸಮಯಕ್ಕೆ ಅಲ್ಲಿಗೆ ಬರುತ್ತಿರುತ್ತೇನೆ. ನನಗೆ ಯಾರು ಪೋಲೀಸರು ಸಹಿ ಮಾಡಲು ಹೇಳಿದರು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಸ್ಥಳ ಮಹಜರ್ ನ್ನು ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡು ಠಾಣೆಯಲ್ಲಿ ಸಹಿ ಮಾಡಿ, ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಊರಿನವರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

(ಐಶ್ವರ್ಯ ಚಿದಾನಂದ ಪಟ್ಟಣ್ ಶೆಟ್ಟಿ)
1 ನೇ ಅಪರ ಸಿ.ಜೆ. ಮತ್ತು ಜೆಎಂಎಫ್.ಸಿ
ಮಳವಳ್ಳಿ